ಸಿ.ಸಿ ನಂಬ್ರ: 1185/2023
ಪಿ.ಡಬ್ಲ್ಯೂ : 1

ದಿನಾಂಕ: 09 -06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ
ಪಾಟೀ ಸವಾಲು : ಆರೋಪಿ ಪರ ಶ್ರೀ ಡಿ ಎಸ್. ವಕೀಲರಿಂದ

1. ಆರೋಪಿತಳು ನನಗೆ 10 ವರ್ಷದಿಂದ ಪರಿಚಯ ಇರುತ್ತಾರೆ. ಅವರು ಮೂಲಶಃ ಶಿರೂರು. ಅವರು ನಮ್ಮ ಮನೆಯ ಪಕ್ಕದಲ್ಲಿ ಬಾಡಿಗೆಗೆ ಇದ್ದರು. ಅವರ ಗಂಡ ಮಕ್ಕಳು ಪರಿಚಯ ಇರುತ್ತಾರೆ. ಅವರ ಗಂಡ ಹೋಟೆಲ್ ಕೆಲಸ ಮಾಡುತ್ತಿರುತ್ತಾರೆ. 1 ಲಕ್ಷದ 50 ಸಾವಿರ ಹಣವನ್ನು ಲೋನ್ ಮಾಡಿ ಕೊಟ್ಟಿರುತ್ತೇನೆ. 1 ಲಕ್ಷದ 10 ಸಾವಿರ ನಗದಾಗಿ ಕೊಟ್ಟಿರುತ್ತೇನೆ. 1 ಲಕ್ಷದ 50 ಸಾವಿರ ಸಾಲ ತೆಗೆದುಕೊಂಡು ನಗದಾಗಿ ಅವರಿಗೆ ಕೊಟ್ಟಿರುತ್ತೇನೆ. ಆರೋಪಿತಳು ಯಾವ ಉದ್ದೇಶಕ್ಕೆ ಹಣ ತೆಗೆದುಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ.

2. ನನಗೆ ಕಷ್ಟ ಇದೆ ಎಂದು ಹಣ ಕೇಳಿರುತ್ತಾರೆ. ನಾನು ಸಮಯ ತೆಗೆದುಕೊಂಡೆ ಹಣವನ್ನು ಕೊಟ್ಟಿರುತ್ತೇನೆ. ನಾನು ಹಣ ಕೊಡುವಾಗ ಭದ್ರತೆಗಾಗಿ ಚೆಕ್ ತೆಗೆದುಕೊಂಡಿರುವುದಿಲ್ಲ. ಹಣವನ್ನು ಹಿಂತಿರುಗಿ ಪಡೆದುಕೊಳ್ಳುವಾಗಿ ಹಣ ಕೊಡುತ್ತೇನೆ ಕೊಡುತ್ತೇನೆ ಎಂದು ಹೇಳಿ ಚೆಕ್ ಕೊಟ್ಟಿರುತ್ತಾರೆ. ಆರೋಪಿತಳು ಸಹಿ ಹಾಗೂ ಮೊತ್ತವನ್ನು ನಮೂದಿಸಿ ಚೆಕ್ ಕೊಟ್ಟಿರುತ್ತಾಳೆ. ಅವರ ಮನೆಯಲ್ಲಿ ಚೆಕ್ ಕೊಟ್ಟಿರುತ್ತಾಳೆ. ನನ್ನ ಎದುರಿಗೆ ಸಹಿ ಮಾಡಿ ಹಣ ನಮೂದಿಸಿ ಚೆಕ್ ಕೊಟ್ಟಿರುತ್ತಾಳೆ.

3. ಚೆಕ್ ನಲ್ಲಿ ಬರೆದಿರುವ ಅಕ್ಷರಕ್ಕೆ ಹಾಗೂ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಅವರೇ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ ಬರೆದವರು ಬೇರೆ, ಸಹಿ ಹಾಕಿದವರು ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನಾನು ಆರೋಪಿತಳಿಗೆ ನೋಟಿಸು ಕೊಟ್ಟಿರುತ್ತೇನೆ. ನೋಟಿಸು ಅವರಿಗೆ ತಲುಪಿರುತ್ತದೆ. ನಾನು ಆರೋಪಿತಳಿಗೆ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ ಕೊಡುವಾಗ ನಾನು ಒಬ್ಬ ಹಾಗೂ ಆರೋಪಿತರ ಗಂಡ ಇದ್ದರು. ಬೇರೆ ಹೊರಗಿನವರು ಬೇರೆಯವರು ಇರಲಿಲ್ಲ. ಆರೋಪಿತಳ ಮೇಲೆ ಒಂದು ಚೆಕ್ ನ ಪ್ರಕರಣದಲ್ಲಿ ಅವರಿಗೆ ಶಿಕ್ಷೆ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ